# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

ಸಿ.ಸಿ. ನಂಃ 368/2023

ಸಿ.ಡಬ್ಲ್ಯೂಃ 02 ಪಿಡಬ್ಲ್ಯೂಃ01

ಸಾಕ್ಷಿದಾರರ ಹೆಸರುಃ ಇಂದ್ರಪ್ಪ ತಂದೆಃ ಅಂದಪ್ಪ
ವಯಸ್ಸುಃ 42 ವರ್ಷ
ಉದ್ಯೋಗಃ ಕೂಲಿ,
ಸಾಕೀನಃ ಇಟ್ಟಗಿ

ದಿಃ **12-08-2024** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ;

**ಆರೋಪಿತನ ಪರಿಚಯ ನನಗೆ ಇರುವುದಿಲ್ಲ.**

**02.** **ನಾನು ಸುಮಾರು 1 ವರ್ಷದ ಹಿಂದೆ ಕೂಲಿ ಮುಗಿಮುಗಿಸಿಕೊಂಡು ಮನೆಗೆ ಬರುವ ಸಮಯದಲ್ಲಿ ಪೋಲಿಸರು ನನ್ನನ್ನು ಕರೆದಿರುತ್ತಾರೆ. ಪೋಲಿಸರ ಕೊರಿಕೆಯ ಮೇರೆಗೆ ನಾನು 2 ದಾಖಲೆಗಳ ಮೇಲೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಪೋಲಿಸರು ಜಪ್ತು ಪಡಿಸಿಕೊಂಡಿರುವುದಿಲ್ಲ. ನಾನು ಆ ದಿನ ಸಹಿ ಮಾಡಿದ ದಾಖಲೆಗಳನ್ನು ಈಗ ನೋಡುತ್ತಿದ್ದು ಅದು ಸ್ದಳದ ಮತ್ತು ಜಪ್ತು ಪಂಚನಾಮೆ, ಕಚ್ಚಾ ನಕಾಶೆ. ಅದನ್ನು ಈಗ ನಿಶಾನೆ.1 ಮತ್ತು 2 ಎಂದು ಗುರುತಿಸಲಾಗಿದ್ದು ನನ್ನ ಸಹಿಯನ್ನು 1ಎ ಮತ್ತು 2ಎ ಎಂದು ಗುರುತಿಸಲಾಯಿತು. ನಿಪಿ.1 ಮತ್ತು 2 ರಲ್ಲಿ ಇರುವ ವಿಚಾರಗಳು ನನಗೆ ಗೋತ್ತಿರುವುದಿಲ್ಲ.**

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ;

ದಿನಾಂಕ : **07.01.2023** ರಂದು ಇಟ್ಟಗಿ ಪಟ್ಟಣದ ಕನ್ನಿ ಹಳ್ಳಿ ರಸ್ತೆಯಲ್ಲಿನ ಆರೋಪಿತನ ಬೀಡಿ ಅಂಗಡಿಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ನನ್ನ ಹಾಗೂ ಚಾಸಾ **3** ರವರ ಸಮಕ್ಷಮ ಚಾಸಾ **1** ರವರು ಬೆ.**8.35** ರಿಂದ **9.35** ರವರೆಗೆ ನಿಪಿ **1** ರಂತೆ ಸ್ಥಳ ಮತ್ತು ಜಪ್ತು ಪಂಚನಾಮೆಯನ್ನು ಮತ್ತು ನಿಪಿ **2** ರಂತೆ ಕಚ್ಚಾ ನಕಾಶೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ ನಿಪಿ **2** ಮತ್ತು **3** ರ ಸಮಯದಲ್ಲಿ **90ml** ನ ವರಿಜನಲ್ ಚಾಯ್ಸ ವಿಸ್ಕಿ **38** ಟೆಟ್ರ ಪ್ಯಾಕಗಳನ್ನು ಮತ್ತು **1** ಹಳೆಯ ಪ್ಲಾಸ್ಟಿಕ್ ಚೀಲಗಳನ್ನು ನಮ್ಮಗಳ ಸಮಕ್ಷಮದಲ್ಲಿ ಚಾಸಾ **1**

ರವರು ಜಪ್ತು ಪಡಿಸಿಕೊಂಡಿರುತ್ತಾರೆಂದರೆ ಗೊತ್ತಿಲ್ಲ ನಿಪಿ 1 ಮತ್ತು 2 ರಲ್ಲಿ ಬರೆದಿರುವ ವಿಚಾರಗಳೆಲ್ಲವೂ ಸಹ ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲೇಂದು ಸುಳ್ಳು ಸಾಕ್ಷಿ ಹೇಳುತಿದ್ದೆನೆಂದರೆ ಸರಿಯಲ್ಲ.

<u>ಪಾಟಿ ಸವಾಲು:</u>ಆರೋಪಿ ಪರ ವಕೀಲರಿಂದ ಇರುವುದಿಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

**Sd/-**

(ಶ್ರೀಮತಿ. ಅಕ್ಷತಾ.ಟಿ)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.